ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮುಖ್ಯ ಅಭಿಯಂತರವರ ಕಛೇರಿ, ರಾಜರಾಜೇಶ್ವರಿನಗರ ವಲಯ
18ನೇ ಕ್ರಾಸ್, ಐಡಿಯಲ್ ಹೋಮ್ಸ್, ರಾಜರಾಜೇಶ್ವರಿನಗರ ಬೆಂಗಳೂರು -560098

ಸಂಖ್ಯೆ : ಮು.ಅ/ರಾರಾನವ/ಪಿ.ಆರ್.27)A/2022-23 ದಿನಾಂಕ : 15/6/22

ಸ್ಥಳ ಪರಿಶೀಲನಾ ವರದಿ

ವಿಷಯ:- **Comprehensive Development of Roads and Drains in Ward No.17 Rajarajeshwari Nagara Assembly Constituency Under Package-2019-20 RRN Div-(03)** ಕಾಮಗಾರಿಗೆ ಸಂಬಂಧಪಟ್ಟ ಅಭಿಯಂತರರೊಡನೆ ಸ್ಥಳ ಪರಿಶೀಲನೆ ನಡೆಸಿರುವ ಬಗ್ಗೆ.

****

ಹಾಜರಿದ್ದ ಅಧಿಕಾರಿಗಳು:

1. ಕಾ.ಪಾ.ಅ(ರಾರಾನಗರ) ವಿಭಾಗ
2. ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಶವಂತಪುರ ಉಪವಿಭಾಗ
3. ಸಹಾಯಕ ಅಭಿಯಂತರರು, ವಾರ್ಡ್ ನಂ.17

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2019-20ನೇ ಸಾಲಿನ ಮಾನ್ಯ ಮುಖ್ಯ ಮಂತ್ರಿಗಳ ನವ ನಗರೋತ್ಥಾನ ಯೋಜನೆಯ ಲೆಕ್ಕಶೀರ್ಷಿಕೆ ಪಿ-3744ರಡಿ ಮೇಲ್ಕಂಡ ಕಾಮಗಾರಿಯು ಅನುಮೋದನೆಗೊಂಡಿರುತ್ತದೆ. ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.1100.00 ಲಕ್ಷಗಳಾಗಿದ್ದು, ಸದರಿ ಕಾಮಗಾರಿಯು ವಾರ್ಡ ನಂ.17ರ ವ್ಯಾಪ್ತಿಯಲ್ಲಿ ಅಡ್ಡರಸ್ತೆಗಳಿಗೆ ರೋಡ್ ಸ್ಟಡ್ಸ್‌ಗಳನ್ನು ಅಳವಡಿಸಲು ಮತ್ತು ಟ್ರಸ್‌ವರ್ಕ್ ಮಾಡಲು ಕಾಮಗಾರಿಯಾಗಿರುತ್ತದೆ.

ಮುಂದುವರೆದು, ಕಾಮಗಾರಿಯು ಪ್ರಾರಂಭಗೊಂಡು ಪ್ರಗತಿಯಲ್ಲಿರುವ ಸಂದರ್ಭದಲ್ಲಿ ಮಾನ್ಯ ಸಚಿವರು ಹಾಗೂ ಸ್ಥಳೀಯ ಶಾಸಕರಾದ ಶ್ರೀ.ಮುನಿರತ್ನ ರವರು ಕಾಮಗಾರಿ ಸ್ಥಳ ಪರಿಶೀಲನೆ ನಡೆಸಿ ಸಾರ್ವಜನಿಕರ ಹಿತದೃಷ್ಟಿಯಿಂದ ಸದರಿ ಅಡ್ಡರಸ್ತೆಗಳಿಗೆ ರೋಡ್ ಸ್ಟಡ್ಸ್‌ಗಳನ್ನು ಅಳವಡಿಸುವ ಮತ್ತು ಟ್ರಸ್‌ವರ್ಕ್ ಮಾಡುವ ಕಾಮಗಾರಿಯ ಬದಲಾಗಿ ಸದರಿ ವಾರ್ಡ್ ವ್ಯಾಪ್ತಿಯಲ್ಲಿರುವ ಗಣೇಶ ವಿಸರ್ಜನಾ ಸ್ಥಳಕ್ಕೆ ನೀರಿನ ಪೈಪ್‌ಲೈನ್ ಅಳವಡಿಕೆ ಮತ್ತು ಈಗಾಗಲೇ ಹಾಳಾಗಿರುವ ಪಾದಚಾರಿ ಮಾರ್ಗ ಮತ್ತು ಹಾಳಾಗಿರುವ ಕಲ್ವರ್ಟ್‌ಗಳನ್ನು ಅಭಿವೃದ್ಧಿ ಪಡಿಸುವ ಕಾಮಗಾರಿ ಕೈಗೊಳ್ಳುವಂತೆ ಸೂಚಿಸಿದರು.

ಅದರಂತೆ, ಕಾಮಗಾರಿಗೆ ಸಂಬಂಧಿಸಿದ ಅಭಿಯಂತರರೊಡನೆ ಸ್ಥಳ ಪರಿಶೀಲನೆ ಕೈಗೊಂಡು ಮಾನ್ಯ ಶಾಸಕರು ಸೂಚಿಸಿರುವಂತೆ ಸಾರ್ವಜನಿಕರ ಹಿತದೃಷ್ಟಿಯಿಂದ ಸದರಿ ವಾರ್ಡ್ ವ್ಯಾಪ್ತಿಯಲ್ಲಿರುವ ಗಣೇಶ ವಿಸರ್ಜನಾ ಸ್ಥಳಕ್ಕೆ ನೀರಿನ ಪೈಪ್‌ಲೈನ್ ಅಳವಡಿಕೆ ಮತ್ತು ಸದರಿ ವಾರ್ಡ್ ವ್ಯಾಪ್ತಿಯಲ್ಲಿ ಈಗಾಗಲೇ ಹಾಳಾಗಿರುವ ಪಾದಚಾರಿ ಮಾರ್ಗ ಮತ್ತು ಕಲ್ವರ್ಟ್‌ಗಳನ್ನು ಅಭಿವೃದ್ಧಿ ಪಡಿಸುವ ಕಾಮಗಾರಿಗೆ ಅವಶ್ಯಕವಿರುವ ಅಂಶಗಳನ್ನು ಅಳವಡಿಸಿಕೊಂಡು ಕಾಮಗಾರಿಯನ್ನು ನಿರ್ವಹಿಸಲು ಅನುಮೋದಿತ ಮೂಲ ಅಂದಾಜು ಪಟ್ಟಿಯ ಮೊತ್ತದಲ್ಲಿ ಸೀಮಿತವಾಗಿರುವಂತೆ ಹಾಗೂ ಪಾಲಿಕೆಗೆ ಯಾವುದೇ ರೀತಿಯ ಹೆಚ್ಚಿನ ಆರ್ಥಿಕ ಹೊರೆ ಇಲ್ಲದಿರುವಂತೆ ಸ್ಥಳಕ್ಕನುಗುಣವಾಗಿ ಅಂದಾಜು ಪಟ್ಟಿಯಲ್ಲಿ ಮಾರ್ಪಾಡು ಮಾಡಿಕೊಂಡು ಅನುಮೋದನೆ ಪಡೆಯಲು ಕಾರ್ಯಪಾಲಕ ಅಭಿಯಂತರರು(ರಾರಾನಗರ) ವಿಭಾಗ ರವರಿಗೆ ಸೂಚಿಸಿದೆ.

ಮುಖ್ಯ ಅಭಿಯಂತರು
ರಾಜರಾಜೇಶ್ವರಿ ನಗರವಲಯ, ಬಿಬಿಎಂಪಿ

ಪ್ರತಿಯನ್ನು,

1. ಕಾರ್ಯಪಾಲಕ ಅಭಿಯಂತರರು(ರಾರಾನಗರ) ವಿಭಾಗ ರವರ ಸೂಕ್ತ ಕ್ರಮಕ್ಕಾಗಿ.
2. ಕಛೇರಿ ಕಡತಕ್ಕೆ.

Scanned with CamScanner